# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 721 (951) |
| ಸದಸ್ಯರ ಹೆಸರು | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 24.08.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಬದಿಗಳಲ್ಲಿ ಸಂಬಂಧಿಸಿದ ಇಲಾಖೆಯಿಂದ ಗಿಡ ಗಳನ್ನು ನೆಡಲು ಅನುಮತಿ ಪಡೆಯಲಾಗಿದೆಯೇ; ಕಳೆದ 3 ವರ್ಷದಿಂದ ಕೋಲಾರ ಜಿಲ್ಲೆಯಲ್ಲಿ ಈವರೆಗೂ ನೀಡಿರುವ ಅನುಮತಿ ಪತ್ರಗಳ ಸಂಖ್ಯೆ ಎಷ್ಟು; [ಪತ್ರವಾರು ಸಂಪೂರ್ಣವಾದ ಮಾಹಿತಿ ನೀಡುವುದು] | ರಸ್ತೆ ಬದಿಗಳಲ್ಲಿ ನೆಡುತೋಪು ರಚನೆ ಮಾಡುವ ಸಂದರ್ಭದಲ್ಲಿ ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಕೋಲಾರ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ ರಸ್ತೆ ಬದಿ ನೆಡುತೋಪು ಬೆಳೆಸಲು ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿರುವ ರಸ್ತೆ ಬದಿಗಳಲ್ಲಿ, ರಸ್ತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದೇ ಎಂಬ ಬಗ್ಗೆ ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯಿಸಿ ರಸ್ತೆಬದಿ ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. |
| ಆ) | ರಸ್ತೆ ಅಭಿವೃದ್ಧಿ ಪಡಿಸುವಾಗ ಗಿಡ ಮರಗಳ ತೆರವುಗೊಳಿಸಲು ಸೂಚಿಸಿದಾಗ ಇಲಾಖಾ ವತಿಯಿಂದ ಹಣ ಪಾವತಿಸಲು ಇರುವ ಮಾನದಂಡಗಳೇನು; ಯಾವ ಮಾನದಂಡದ ಮೇಲೆ ಸರ್ಕಾರದಿಂದ ಹಣ ಪಡೆಯಲಾಗುತ್ತಿದೆ; ಸರ್ಕಾರದಿಂದ 1 ಕಿ.ಮೀ. ಗೆ ನಿಗಧಿಪಡಿಸಿರುವ ಮೊತ್ತವೆಷ್ಟು; ಪಾವತಿಯಾಗಿರುವ ಹಣವನ್ನು ಯಾವ ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ; [ಸಂಪೂರ್ಣವಾದ ಮಾಹಿತಿ ನೀಡುವುದು] | • ರಸ್ತೆ ಅಭಿವೃದ್ಧಿಪಡಿಸುವ / ರಸ್ತೆ ಬದಿ ಇರುವ ಮರಗಳನ್ನು ತೆರವುಗೊಳಿಸುವ ವಿಷಯದಲ್ಲಿ ಈ ಕೆಳಕಂಡ ಮಾನದಂಡಗಳಂತೆ ಕ್ರಮವಹಿಸಬೇಕಾಗಿರುತ್ತದೆ.<br>• **ರಸ್ತೆ ಅಭಿವೃದ್ಧಿಪಡಿಸಲು ಅಗತ್ಯವಿರುವ ಜಮೀನು ಅರಣ್ಯ ಪ್ರದೇಶವಾಗಿದ್ದಲ್ಲಿ** ಸಂಬಂದಿಸಿದ ಉಪಯೋಗಿ ಸಂಸ್ಥೆಯು Van (Sanrakshan Evam Samvardhan) Adhiniyam, 1980[ಈ ಹಿಂದಿನ ಅರಣ್ಯ (ಸಂರಕ್ಷಣೆ) ಕಾಯ್ದೆ, 1980] ರಲ್ಲಿ ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆದು ಸರ್ಕಾರವು ವಿಧಿಸಿದ ವಿವಿಧ ಶುಲ್ಕ/ಮೊತ್ತಗಳನ್ನು ನಿಗಧಿತ ವೆಬ್ ಪೋರ್ಟಲ್ ಮೂಲಕ ಸರ್ಕಾರಕ್ಕೆ ಪಾವತಿಸಬೇಕಾಗಿರುತ್ತದೆ.<br>• **ರಸ್ತೆ ಅಭಿವೃದ್ಧಿಪಡಿಸಲು ಅಗತ್ಯವಿರುವ ಜಮೀನು ಅರಣ್ಯೇತರ ಪ್ರದೇಶವಾಗಿದ್ದಲ್ಲಿ** ಸಂಬಂದಿಸಿದ ಉಪಯೋಗಿ ಸಂಸ್ಥೆಯು ಅರಣ್ಯ ಇಲಾಖೆಗೆ ಈ ಕೆಳಕಂಡಂತೆ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.<br>1. ಕತ್ರಾವಣೆ ಮಾಡಬೇಕಾದ ರಸ್ತೆ ಬದಿ ಮರಗಳ ಸಂಖ್ಯೆಯ 10 ಪಟ್ಟು ಸಂಖ್ಯೆಯಲ್ಲಿ (1:10) ಮರಗಳನ್ನು ಬೆಳೆಸಲು ಸರ್ಕಾರದ ಆದೇಶ ಸಂಖ್ಯೆ: ಅಪಜೀ 168 ಎಫ್‌ಡಿಪಿ 2017 ದಿನಾಂಕ 06.12.2018 r/w ತಿದ್ದುಪಡಿ ಆದೇಶ ದಿನಾಂಕ 07.12.2018 ಮತ್ತು ಸರ್ಕಾರದ ಆದೇಶ ಸಂಖ್ಯೆ:ಅಪಜೀ 39 ಎಫ್‌ಡಿಪಿ 2021 ದಿನಾಂಕ 26.07.2022 (ದರಗಳ ಪರಿಷ್ಕರಣೆ)ರಲ್ಲಿ ವಿಧಿಸಿದ ದರ **ಪ್ರತಿ ಮರಕ್ಕೆ ರೂ.411.27**;<br>2. ಅಭಿವೃದ್ಧಿಪಡಿಸಬೇಕಾದ ರಸ್ತೆಯ ಉದ್ದಕ್ಕೆ ಮರಗಳನ್ನು ಬೆಳೆಸಲು ಸರ್ಕಾರದ ಆದೇಶ ಸಂಖ್ಯೆ:ಅಪಜೀ 38 ಎಫ್‌ಡಿಪಿ 2019 ದಿನಾಂಕ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 06.01.2023ರಲ್ಲಿ ವಿಧಿಸಿದ ದರ **ಪ್ರತಿ ಕಿ.ಮೀ ರೂ.9,06,050**;<br>3. ಒಂದು ವೇಳೆ ರಸ್ತೆ ಬದಿ ಮರಗಳನ್ನು ಉಪಯೋಗಿಸಂಸ್ಥೆಯೇ ಕತ್ತಾವಣೆ ಮಾಡಲು ಇಚ್ಛಿಸಿದಲ್ಲಿ, ಸದರಿ **ಮರಗಳಿಂದ ದೊರೆಯಬಹುದಾದ ನಾಟಾ ಮತ್ತು ಸೌದೆಗೆ ಅಂದಾಜಿಸಿದ ಮೌಲ್ಯ ಮತ್ತು ಚಾಲ್ತಿಯಲ್ಲಿರುವ ತೆರಿಗೆ/ಶುಲ್ಕಗಳು.**<br>• ಉಪಯೋಗಿ ಸಂಸ್ಥೆಯಿಂದ ಪಾವತಿಯಾಗಿರುವ ಹಣವನ್ನು ನೇರವಾಗಿ ಸರ್ಕಾರದ ಬೊಕ್ಕಸಕ್ಕೆ ಜಮೆಯಾಗುತ್ತದೆ. ನಂತರದ ಅವಧಿಯಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾದ ಅನುದಾನವನ್ನು ಅರಣ್ಯ ಅಭಿವೃದ್ಧಿಗಾಗಿ ಬಳಸಲಾಗುತ್ತಿದೆ. |
| ಇ) | ವೇಮಗಲ್ ಮತ್ತು ಸೀತಿ ರಸ್ತೆಗೆ ಸಂಬಂಧಿಸಿದಂತೆ ಗಿಡ ಮರಗಳ ತೆರವುಗೊಳಿಸಲು ಲೋಕೋಪಯೋಗಿ ಇಲಾಖೆಯು ಅರಣ್ಯ ಇಲಾಖೆಗೆ ಸೂಚಿಸಿದ್ದು, ಅರಣ್ಯ ಇಲಾಖೆಯಿಂದ ಈವರೆಗೂ ಯಾವ ಕ್ರಮ ಕೈಗೊಳ್ಳಲಾಗಿದೆ. ಯಾವುದೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಕ್ರಮ ಕೈಗೊಳ್ಳದೇ ಇರಲು ಕಾರಣವೇನು? [ಸಂಪೂರ್ಣವಾದ ಮಾಹಿತಿ ನೀಡುವುದು] | • ವೇಮಗಲ್ ಮತ್ತು ಸೀತಿ ರಸ್ತೆಗೆ ಸಂಬಂಧಿಸಿದಂತೆ ಗಿಡ ಮರಗಳ ತೆರವುಗೊಳಿಸಲು ಲೋಕೋಪಯೋಗಿ ಇಲಾಖೆಯು ಅರಣ್ಯ ಇಲಾಖೆಗೆ ಸೂಚಿಸಿದ್ದು, ಇದಕ್ಕಾಗಿ ಅರಣ್ಯ ಇಲಾಖೆಯಿಂದ ಈ ಕೆಳಕಂಡ ಕ್ರಮಕೈಗೊಳ್ಳಲಾಗಿದೆ.-<br>• ಸಂಬಂದಿಸಿದ ರಸ್ತೆ ಬದಿ ಇರುವ ಕತ್ತಾವಣೆ ಮಾಡಬೇಕಾಗಿರುವ ಮರಗಳನ್ನು ಗುರುತಿಸಿ, ಈ ಮೇಲೆ ಉಲ್ಲೇಖಿಸಿದ ಸರ್ಕಾರದ ಆದೇಶಗಳಲ್ಲಿ ನಿಗದಿಪಡಿಸಿದ ಹಾಗೂ ಸದರಿ ಮರಗಳಿಂದ ದೊರೆಯಬಹುದಾದ ಅಂದಾಜು ನಾಟಾ ಮತ್ತು ಸೌದೆಯ ಮೌಲ್ಯಕ್ಕೆ ಲೆಕ್ಕಾಚಾರ ಮಾಡಿ ಈ ಕೆಳಕಂಡ ನಿಗದಿತ ಮೊತ್ತಗಳನ್ನು ಸರ್ಕಾರಕ್ಕೆ ಪಾವತಿಸಲು ಸಂಬಂದಿಸಿದ ಉಪಯೋಗಿ ಸಂಸ್ಥೆಗೆ ಈಗಾಗಲೇ ಸೂಚಿಸಲಾಗಿರುತ್ತದೆ. |

| [illegible] | [illegible] | |
|---|---|---|
| 1 | 1:10 ಮರ ಕತ್ತಾವಣೆ ಸಂಬಂದ ಮೊತ್ತ @ ರೂ.411.27 X 457 ಮರಗಳು X 10 | 18,79,504 |
| 2 | ರಸ್ತೆ ಬದಿ ನೆಡುತೋಪು ಬೆಳಸಲು ಮೊತ್ತ @ ರೂ.9,06,050 ಪ್ರತಿ ಕಿ.ಮೀ. (6 ಕಿ.ಮೀ.ಗೆ) | 54,36,300 |
| | **ಒಟ್ಟು (A)** | **73,15,804** |
| 3 | ಮರ ಕತ್ತಾವಣೆಯಿಂದ ದೊರೆಯಬಹುದಾದ ನಾಟಾದ ಅಂದಾಜಿಸಿದ ಮೌಲ್ಯ | 4,54,877 |
| 4 | ಮರ ಕತ್ತಾವಣೆಯಿಂದ ದೊರೆಯಬಹುದಾದ ಸೌದೆಯ ಅಂದಾಜಿಸಿದ ಮೌಲ್ಯ | 2,18,183 |
| 5 | ಅರಣ್ಯ ಅಭಿವೃದ್ಧಿ ಶುಲ್ಕ (12%) | 80,767 |
| 6 | ಜಿಎಸ್‌ಟಿ @ 18% (ನಾಟಾ ಮೌಲ್ಯಕ್ಕೆ) | 81,878 |
| 7 | ಆದಾಯ ತೆರಿಗೆ @2.5% (ನಾಟಾ ಮೌಲ್ಯ + ಸೌದೆ ಮೌಲ್ಯ + ಅರಣ್ಯ ಅಭಿವೃದ್ಧಿ ಶುಲ್ಕಕ್ಕೆ) | 18,846 |
| | **ಒಟ್ಟು (B)** | **8,54,551** |
| | **ಒಟ್ಟು ಮೊತ್ತ (A + B)** | **81,70,355** |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | • ಉಪಯೋಗಿ ಸಂಸ್ಥೆಯು ಸದರಿ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿದ ನಂತರ ಮರಗಳ ಕತ್ತಾವಣೆ ಕುರಿತು ಅರಣ್ಯ ಇಲಾಖೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ. |

**ಇ-ಸಂಖ್ಯೆ: ಅಪಜೀ 31 ಎಫ್‌ಟಿಎಸ್ 2026**

**(ರಾಮಲಿಂಗಾರೆಡ್ಡಿ)**
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು